ಆ) ಹಾಗಿಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀ ಟಿ. ಎನ್. ನರಸಿಂಹ ಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಹೌದು.

ಆ) ಉದ್ಭವಿಸುವುದಿಲ್ಲ.

ತೋಟಗಾರಿಕೆ ಅಭಿವೃದ್ಧಿ ಕುರಿತಂ

೪೯೪ ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಬಂದರು ಮೀನುಗಾರಿಕೆ, ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ತೋಟಗಾರಿಕೆಗೆಂದೇ ಮೀಸಲಾದ ಜಮೀನಿನ ವಿಸ್ತೀರ್ಣ ಎಷ್ಟು :

ಆ) ಪ್ರಸಕ್ತ ಸಾಲಿನಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ಸರ್ಕಾರವು ತೆಗೆದುಕೊಳ್ಳುವ ಕ್ರಮಗಳಾದರೂ ಏನು ?

ಇ) ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ತೋಟಗಾರಿಕೆ ಇಲಾಖೆಯ ವತಿಯಿಂದ ಸಾರ್ವಜನಿಕ ಮಳಿಗೆಗಳನ್ನು ತೆಗೆಯದಿರಲು ಕಾರಣಗಳೇನು :

ಈ) ಎಲ್ಲಾ ಕೇಂದ್ರಗಳಲ್ಲೂ ತೋಟಗಾರಿಕೆ ಮಳಿಗೆಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು).—

ಅ) ರಾಜ್ಯದಲ್ಲಿ ಸುಮಾರು ೧೧.೯೮ ಲಕ್ಷ ಹೆಕ್ಟೇರು (೧೯೮೮-೮೯ ರಲ್ಲಿದ್ದಂತೆ) ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ.

ಆ) ಪ್ರಸಕ್ತ ಸಾಲಿನಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ೪೧ ಯೋಜನೆಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

ಇ) ಈಗಾಗಲೇ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ತೋಟದ ಉತ್ಪನ್ನಗಳ ಬೆಳೆಗಾರರ ಸಹಕಾರಿ ಮಾರಾಟ ಸಂಘಗಳ ವತಿಯಿಂದ ಹಾಸನ ಜಿಲ್ಲೆಯನ್ನು ಹೊರತುಪಡಿಸಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ಮಾರಾಟ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾ ತೋಟದ ಉತ್ಪನ್ನಗಳ ಬೆಳೆಗಾರರ ಸಂಘಗಳ ಹಣಕಾಸಿನ ಸ್ಥಿತಿ ಸುಧಾರಿಸದೇ ಇರುವುದರಿಂದಲೂ ಸಿಬ್ಬಂದಿ ಮತ್ತು ಇತರ ಸೌಕರ್ಯಗಳು ಇಲ್ಲದೇ ಇರುವುದರಿಂದ ಇಂತಹ ಮಳಿಗೆಗಳನ್ನು ತಾಲ್ಲೂಕು ಮಟ್ಟದಲ್ಲಿ ಇದುವರೆಗೆ ತೆರೆಯುವುದು ಸಾಧ್ಯವಾಗಿಲ್ಲ.

ಈ) ಜಿಲ್ಲಾ ಮಟ್ಟದಲ್ಲಿನ ಸಂಘಗಳ ಆರ್ಥಿಕ ವಹಿವಾಟು ಸುಧಾರಿಸಿದ ಮೇಲೆ ಮತ್ತು ಗ್ರೇಡಿಂಗ್, ಪ್ಯಾಕಿಂಗ್ ಶೇಖರಣೆ (ಶೀತಲ ಗೃಹಗಳು ಸೇರಿ) ಮತ್ತು ಸಾರಿಗೆ ಮುಂತಾದ ಮೂಲ ಸೌಲಭ್ಯಗಳು ಸುಧಾರಿಸಿದ ಮೇಲೆ ಹಂತ ಹಂತವಾಗಿ ತಾಲ್ಲೂಕು ಮಟ್ಟದ ಶಾಖೆಗಳು ಮಾರಾಟ ಮಳಿಗೆಗಳನ್ನು ತೆರೆಯಲಾಗುವುದು

ರಾಜ್ಯಗಳಲ್ಲಿರುವ ಶಾಸನಗಳು ಸ್ಮಾರಕಗಳನ್ನು ರಕ್ಷಿಸುವ ಕುರಿತಂ

೪೯೫ ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಶಿಕ್ಷಣ, ಯುವ ಜನ ಸೇವಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ .—

ಅ) ರಾಜ್ಯದಲ್ಲಿರುವ ಐತಿಹಾಸಿಕ ಶಾಸನಗಳು-ಸ್ಮಾರಕಗಳು ಸೂಕ್ತ ರಕ್ಷಣೆಯಿಲ್ಲದೆ ನಶಿಸಿ ಹೋಗುತ್ತಿರುವುದು ಹಾಗೂ ಕಣ್ಮರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಸದರಿ ಶಾಸನಗಳು-ಸ್ಮಾರಕಗಳನ್ನು ರಕ್ಷಿಸಲು ಸರ್ಕಾರವು ಹಾಕಿಕೊಂಡಿರುವ ಕಾರ್ಯಕ್ರಮವೇನು, ಅದಕ್ಕೆ ತಗಲುವ ವೆಚ್ಚ ಎಷ್ಟು :

ಇ) ಹಳಗನ್ನಡದಲ್ಲಿರುವ ಶಾಸನಗಳನ್ನು ಹೊಸ ಕನ್ನಡಕ್ಕೆ ಪರಿವರ್ತಿಸಿ ಶಾಸನಗಳ ಪಕ್ಕದಲ್ಲೇ ಉಲ್ಲೇಖಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ ಯುಕ್ತವೆಲ್ಲವೇ :

ಈ) ಹಾಗಿದ್ದರೆ, ಸರ್ಕಾರವು ಈ ನಿಟ್ಟಿನಲ್ಲಿ ತೆಗೆದುಕೊಳ್ಳುವ ಕ್ರಮಗಳೇನು ?